**ದಿನಾಂಕ 28.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ: ಶ್ರೀ. ಟಿ.ಜಿ.ಎಸ್. ವಕೀಲರಿಂದಃ–**

ನಾನು ಪದವಿ ಮುಗಿಸಿರುತ್ತೇನೆ. ನಾನು ಸ್ನಾತಕೋತ್ತರ ಪದವಿಯನ್ನು ಮಾಡಿರುವುದಿಲ್ಲ. ನಾನು ಮತ್ತು ಎದುರುದಾರರು ಪರಸ್ಪರ ಪ್ರೀತಿಸಿ ಮದುವೆಯಾಗುತ್ತೇವೆ ಎಂದರೆ ಸರಿ. ಎದುರುದಾರರ ಊರು ಮರುಳನಹಳ್ಳಿ ಗ್ರಾಮ, ನನ್ನದು ಕಾಮನಕೆರೆ ಗ್ರಾಮ ಎಂದರೆ ಸರಿ. ನಾನು ಮತ್ತು ಎದುರುದಾರರು ಪ್ರೀತಿಸುತ್ತಿದ್ದ ವಿಚಾರ ಇಬ್ಬರು ಕುಟುಂಬದವರ ಗಮನಕ್ಕೆ ಬಂದಿತ್ತು ಎಂದರೆ, ಕೊನೆಯ ಸಮಯದಲ್ಲಿ ಕುಟುಂಬದವರಿಗೆ ತಿಳಿದಿತ್ತು ಎಂದು ನುಡಿಯುತ್ತಾರೆ. ಸದರಿ ನಮ್ಮಿಬ್ಬರ ಪ್ರೀತಿ ವಿಚಾರ ನನ್ನ ಮನೆಗೆ ತಿಳಿದು ನಮ್ಮ ಕುಟುಂಬದವರು ನನಗೆ ಬುದ್ಧಿವಾದ ಹೇಳಿ ಎದುರುದಾರರು ಯಾವುದೇ ಕೆಲಸ ಮಾಡುತ್ತಿಲ್ಲ, ಆರ್ಥಿಕವಾಗಿ ಸದೃಢವಾಗಿರುವುದಿಲ್ಲ, ಪ್ರೀತಿ ಮಾಡುವುದು ಬೇಡ ಎಂದು ನನಗೆ ತಿಳಿಸಿದ್ದರು ಎಂದರೆ, ಸಾಕ್ಷಿಯು ಎದುರುದಾರರನ್ನು ನಾನು ಪ್ರೀತಿಸುವಾಗ ಎದುರುದಾರರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ವಿವಾಹದ ನಂತರವೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ಮನೆಯವರು ಪ್ರೀತಿಯ ವಿಚಾರದಲ್ಲಿ ಬುದ್ಧಿ ಹೇಳಿರುತ್ತಾರೆ ಎಂದು ಸಹ ನುಡಿಯುತ್ತಾರೆ. ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್ ನಲ್ಲಿರುವ ಗಣೇಶ ದೇವಸ್ಥಾನದಲ್ಲಿ ನಮ್ಮ ಮನೆಯವರ ಇಚ್ಛೆಗೆ ವಿರುದ್ಧವಾಗಿ ಎದುರುದಾರರನ್ನು ವಿವಾಹ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

ನನ್ನ ವಿವಾಹವಾದ ದಿನದಂದು ಎದುರುದಾರರು ನನಗೆ ಬಟ್ಟೆ ಒಡವೆಗೆ ಸಂಬಂಧಿಸಿದಂತೆ ಸಾಕಷ್ಟು ಹಣವನ್ನು ವ್ಯಯ ಮಾಡಿ ವಿವಾಹ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿವಾಹವಾಗುವಾಗ ಒಂದು ತಾಳಿಯನ್ನು ಕಟ್ಟಿರುತ್ತಾರೆಯೇ ವಿನಃ ಬೇರೆ ಏನನ್ನು ಕೊಡಿಸಿರುವುದಿಲ್ಲ ಮತ್ತು ಖರ್ಚು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಕುಟುಂಬದವರ ಇಚ್ಛೆಗೆ ವಿರುದ್ಧವಾಗಿ ವಿವಾಹ ಮಾಡಿಕೊಂಡಿದ್ದರಿಂದ ನನ್ನನ್ನು ಮತ್ತು ಎದುರುದಾರರನ್ನು ನಮ್ಮ ಕುಟುಂಬದವರು ದ್ವೇಷದಿಂದ ನೋಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಪ್ರೀತಿಸುತ್ತಿದ್ದಾಗ ನನ್ನ ಕುಟುಂಬದವರು ಅದನು ವಿರೋಧಿಸಿದ್ದರು, ಆದರೆ ವಿವಾಹವಾದ

ನಂತರ ನನ್ನನ್ನು ಮತ್ತು ಎದುರುದಾರರನ್ನು ಕರೆದುಕೊಂಡು ಹೋಗಿ ಊರಿನಲ್ಲಿ ರಿಸೆಪ್ಷನ್ ಅನ್ನು ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ಕುಟುಂಬದವರು ಎದುರುದಾರರನ್ನು ದ್ವೇಷಿಸುತ್ತಿದ್ದರೂ ಸಹ ಊರಿನಲ್ಲಿರುವ ಜನರಿಗೋಸ್ಕರ ಮತ್ತು ನಾಮಕವಾಸ್ಥೆಗೆ ರಿಸೆಪ್ಷನ್ ಅನ್ನು ಮಾಡಿರುತ್ತಾರೆ, ಆದರೆ ಈಗಲೂ ಸಹ ನನ್ನ ಕುಟುಂಬದವರು ಎದುರುದಾರರು ದ್ವೇಷಿಸುತ್ತಿರುತ್ತಾರೆ ಎಂದರೆ ಸರಿಯಲ್ಲ.

ರಿಸೆಪ್ಷನ್ ಮಾಡುವ ಸಂದರ್ಭದಲ್ಲಿ ನನ್ನ ತವರು ಮನೆಯವರು ಎದುರುದಾರರಿಗೆ 50 ಗ್ರಾಂ. ಚಿನ್ನದ ಬ್ರಾಸ್ ಲೇಟ್, ಸರ, ಉಂಗುರ ಹಾಗೂ 100 ಗ್ರಾಂ. ತೂಕ ಸರ ಮತ್ತು ಬಳೆಗಳನ್ನು ಕೊಟ್ಟು ವಿವಾಹ ಮಾಡಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಚಿನ್ನವನ್ನು ಯಾವ ಚಿನ್ನಾಭರಣದ ಅಂಗಡಿಯಲ್ಲಿ ಮಾಡಿಸಲಾಗಿರುತ್ತದೆ ಮತ್ತು ಅದಕ್ಕೆ ಸಂಬಂಧಿಸಿದ ಹಣ ಸಂದಾಯ ರಶೀದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಶಿವಮೊಗ್ಗದ ಜೋಯಲುಕಾಸ್ ಒಡವೆ ಅಂಗಡಿಯಲ್ಲಿ ನನಗೆ ಒಡವೆಗಳನ್ನು ಮಾಡಿಸಿದ್ದು, ಎದುರುದಾರರಿಗೆ ಕಡೂರಿನ ಚಿನ್ನಾಭರಣದ ಅಂಗಡಿಯಲ್ಲಿ ಒಡವೆಗಳನ್ನು ಮಾಡಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ಹಣ ಸಂದಾಯ ರಶೀದಿಗಳನ್ನು ಇಟ್ಟುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತವರು ಮನೆಯರು ಎದುರುದಾರರಿಗೆ ಯಾವುದೇ ಬಂಗಾರವನ್ನು ಕೊಡಿಸಿರುವುದಿಲ್ಲ, ಸದರಿ ಅಂಶಗಳನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ವಿವಾಹದ ನಂತರ ಬೆಂಗಳೂರಿನಲ್ಲಿರುವ ಆರ್.ಟಿ. ನಗರದಲ್ಲಿ ಎದುರುದಾರರು ಮನೆ ಮಾಡಲು ನನ್ನ ತಂದೆ ಮುಂಗಡ ಹಣ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆ ಮನೆ ಮಾಡಲು ಮುಂಗಡದ ಹಣದ ಜೊತೆಗೆ ಮನೆ ಸಾಮಾನುಗಳನ್ನು ಕೊಡಿಸಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಎದುರುದಾರರಿಗೆ ಯಾವುದೇ ಮನೆ ಸಾಮಾನುಗಳನ್ನು ಕೊಡಿಸಿರುವುದಿಲ್ಲ, ಎದುರುದಾರನೇ ಮನೆ ಸಾಮಾನುಗಳನ್ನು ಸಾಲ ಮಾಡಿ ತಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ತಿಳಿಸಿದಂತೆ ಎದುರುದಾರರು ನನ್ನನ್ನು ಮದುವೆ ಮಾಡಿಕೊಂಡು ಎದುರುದಾರರ ಮನೆಗೆ ನಾನು ಬಂದ ನಂತರ ಎದುರುದಾರರು ನನಗೆ ವರದಕ್ಷಿಣೆ ತರುವಂತೆ, ನಿವೇಶನ ಮತ್ತು ಕಾರನ್ನು ಕೊಡಿಸುವಂತೆ ನನ್ನ ತಂದೆಯನ್ನು ಕೇಳು ಎಂದು ಕಿರುಕುಳ ನೀಡುತ್ತಿದ್ದರು ಎಂಬುದು ಸಹ

ಸುಳ್ಳು ಎಂದರೆ ಸರಿಯಲ್ಲ.

2 ನೇ ಅರ್ಜಿದಾರರ ಜನನದ ಸಂದರ್ಭದಲ್ಲಿ ಎದುರುದಾರರೇ ಆಸ್ಪತ್ರೆಯ ಖರ್ಚು–ವೆಚ್ಚುಗಳನ್ನು ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. 2 ನೇ ಅರ್ಜಿದಾರರು ಜನಿಸಿದ ನಂತರ ನನ್ನನ್ನು ಮತ್ತು ಮಗುವನ್ನು ಬೆಂಗಳೂರಿಗೆ ಎದುರುದಾರರು ಕರೆದುಕೊಂಡು ಹೋಗಬೇಕಾದರೆ ಎದುರುದಾರನಿಗೆ ಬೆಂಗಳೂರಿನಲ್ಲಿ ಒಂದು ನಿವೇಶನ ಮತ್ತು ಕಾರನ್ನು ಕೊಡಿಸಬೇಕೆಂದು ಬೇಡಿಕೆಯನ್ನು ಇಟ್ಟಿದ್ದರು ಎಂಬುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ನಿವೇಶನ ಮತ್ತು ಕಾರನ್ನು ಕೊಡಿಸದಿದ್ದರೆ ಎರಡನೇ ವಿವಾಹವಾಗುವುದಾಗಿ ನನಗೆ ಹೆದರಿಸುತ್ತಿದ್ದರು ಎಂಬುದು ಸಹ ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ತಿಳಿಸಿದಂತೆ ನನ್ನ ತಂದೆ ಎದುರುದಾರರನ್ನು 2022 ರಲ್ಲಿ ಕರೆದು ನಾನು ಸಾಲ ಮಾಡಿ ಕಾರನ್ನು ಕೊಡಿಸಿ ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಎದುರುದಾರರೊಂದಿಗೆ ಕಳುಹಿಸಿಕೊಟ್ಟಿದ್ದರು ಎಂಬುದು ಸಹ ಸುಳ್ಳು ಎಂದರೆ ಸರಿಯಲ್ಲ.

ನಾನು ಎದುರುದಾರರೊಂದಿಗೆ ವಿಲಾಸಿ ಜೀವನ ನಡೆಸಬೇಕೆಂದು ಬಲವಂತವಾಗಿ ಕಾರನ್ನು ಖರೀದಿಸುವಂತೆ ತಿಳಿಸಿದ್ದು ಅದರಂತೆ ಎದುರುದಾರರು ಬ್ಯಾಂಕ್ ಆಫ್ ಬರೋಡ ಬ್ಯಾಂಕಿನಿಂದ ಸಾಲ ಮಾಡಿ ಕಾರನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಇದ್ದಾಗಲೂ ಸಹ ಪುನಃ ಎದುರುದಾರರು ನನಗೆ ನಿವೇಶನವನ್ನು ಕೊಡಿಸು ಎಂದು ಪೀಡಿಸುತ್ತಿದ್ದರು ಎಂಬುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಎದುರುದಾರರು ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದು, ಅದಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದೆ ಎಂಬುದು ಸಹ ಸುಳ್ಳು ಎಂದರೆ ಸರಿಯಲ್ಲ.

ನಂತರ ಎದುರುದಾರರು ನಮ್ಮ ಗ್ರಾಮಕ್ಕೆ ಬಂದು ನನ್ನ ತಂದೆಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನನ್ನ ತಂದೆ ಎದುರುದಾರನ ವಿರುದ್ಧ ಬೀರೂರು ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಎದುರುದಾರರ ಮೇಲೆ ನನ್ನ ಕುಟುಂಬದವರಿಗೆ ದ್ವೇಷವಿದ್ದುದ್ದರಿಂದ ಎದುರುದಾರರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ನಂತರ ಎದುರುದಾರರು ಊಟ, ವಸತಿ ಮತ್ತು ಬಟ್ಟೆಯನ್ನು ಕೊಡದೆ ನನ್ನನ್ನು ಮತ್ತು 2 ನೇ ಅರ್ಜಿದಾರರಿಗೆ ಮನೆಯಿಂದ ಹೊರಹಾಕಿದ್ದು, ಅದಕ್ಕೆ ಸಂಬಂಧಿಸಿದಂತೆ ಕಡೂರಿನ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದು ತಿಳಿಸಿದ್ದು, ಆದರೆ ಎದುರುದಾರರು ಎಂದಿಗೂ ನನಗೆ ಮತ್ತು 2 ನೇ ಅರ್ಜಿದಾರರಿಗೆ ಊಟ, ವಸತಿ ಮತ್ತು ಬಟ್ಟೆಯನ್ನು ಕೊಡದೆ ಹೊರ ಹಾಕಿರುವುದಿಲ್ಲ, ನಾನೇ ಎದುರುದಾರರ ಮನೆಯನ್ನು ಬಿಟ್ಟು ಬಂದು ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಎದುರುದಾರರ ವಿರುದ್ಧ ಸಲ್ಲಿಸಿರುವ ಅರ್ಜಿಯು ತಪ್ಪೆಂದು ನನಗೆ ಮನವರಿಕೆಯಾಗಿ ಸ್ವತಃ ನಾನೇ ನನ್ನ ಇಷ್ಟದಂತೆ ಸದರಿ ಅರ್ಜಿಯನ್ನು ಹಿಂಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎದುರುದಾರರು ಸದರಿ ಸಮಯದಲ್ಲಿ ವಿಶ್ವಾಸದಿಂದ ಮಾತನಾಡಿ, ಎದುರುದಾರರೊಂದಿಗೆ ಕರೆದುಕೊಂಡು ಹೋಗಿ ಕೇಸನ್ನು ಹಿಂಪಡೆದ ನಂತರ ಪುನಃ ಎದುರುದಾರರು ಬೆಂಗಳೂರಿನಿಂದ ನನ್ನನ್ನು ವಾಪಸ್ಸು ನನ್ನ ತವರು ಮನೆಗೆ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರಕರಣವನ್ನು ನಾನು ಹಿಂಪಡೆದ ನಂತರ ಎದುರುದಾರರು ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ನನ್ನ ಮಾಂಗಲ್ಯ ಸರ ಮತ್ತು ಬಳೆಯನ್ನು ಅವರ ಖಾತೆಗೆ ಮತ್ತು ನನ್ನ ಖಾತೆಗೆ ಅಡಮಾನ ಮಾಡಿಸಿಕೊಂಡು ಹಣಪಡೆದಿರುತ್ತಾರೆ ಎಂದು ಹೇಳಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ. ಸದರಿ ದಾಖಲೆಯು ನನ್ನ ಬಳಿ ಇರುತ್ತವೆ. ನಾನು ಎಂ.ಎಸ್ಸಿ ವಿದ್ಯಾಭ್ಯಾ ಮಾಡಲು ಸೇರಿಕೊಂಡಿರುತ್ತೇನೆ, ಆದರೆ ಅದನ್ನು ನಾನು ಪೂರ್ಣಗೊಳಿಸದೆ ಅರ್ಧಕ್ಕೆ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢವಾಗಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ನಾವು ಮೂರು ಜನ ಮಕ್ಕಳು. ಕಡೂರಿನಲ್ಲಿ ಒಂದು ಹೋಲ್‌ಸೇಲ್ ಟೈರ್ ವ್ಯಾಪಾರದ ಅಂಗಡಿಯನ್ನು ನಮ್ಮ ಕುಟುಂಬದವರು ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಟೈರ್ ಅಂಗಡಿಯಲ್ಲಿ ನನ್ನ ಅಣ್ಣ ಕೆಲಸಕ್ಕೆ ಹೋಗುತ್ತಾನೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸುಮಾರು 30 ಎಕರೆ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 10 ಎಕರೆ ಆಸ್ತಿ ಇರಬಹುದು, ಆದರೆ ಅದರ ಬಗ್ಗೆ ನನಗೆ

ಸರಿಯಾಗಿ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸಹ ಸದೃಢಳಾಗಿದ್ದು, ವಿದ್ಯಾಭ್ಯಾಸ ಮಾಡಿದ್ದು, ನನ್ನ ತಂದೆಯ ಮನೆಯವರು ಸಹ ಆರ್ಥಿಕವಾಗಿ ಸದೃಢರಾಗಿರುತ್ತಾರೆ ಎಂದರೆ ಸರಿಯಲ್ಲ.

ಎದುರುದಾರರ ತಂದೆಗೆ ಇಬ್ಬರು ಮಕ್ಕಳು ಎಂದರೆ ಸರಿ. ಎದುರುದಾರರ ತಂದೆಗೆ ಅಪಘಾತವಾಗಿ ತಲೆಗೆ ಪೆಟ್ಟು ಬಿದ್ದಿದ್ದು ನಾನು ಅವರನ್ನು ಉಪಚರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತವಾಗಿ ನನ್ನ ಮಾವನ ತಲೆಗೆ ಪೆಟ್ಟು ಬಿದ್ದಿದ್ದು, ಈಗ ಅವರು ಹುಷಾರಾಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಇತ್ತೀಚೆಗೆ ನನ್ನ ಮಾವನವರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನವರಿಗೆ ಅಪಘಾತದಿಂದ ಅವರ ತಲೆಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದು ಅವರು ಈಗಲೂ ಸಹ ಹಾಸಿಗೆ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರನ ತಂದಗೆ ನರಗಳ ದೌರ್ಬಲ್ಯ ಇದ್ದು, ಅವರು ತಿರುಗಾಡಲು ಸಾಧ್ಯವಾಗದೆ ಇದ್ದು, ಅವರನ್ನು ನೋಡಿಕೊಳ್ಳುವ ಜವಬ್ದಾರಿ ಎದುರುದಾರರ ಮೇಲೆ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರರ ತಂದೆಗೆ ಚಿಕಿತ್ಸೆಗಾಗಿ ಮಾಸಿಕವಾಗಿ ಸುಮಾರು ರೂ.15,000/- ಹಣವನ್ನು ಈಗಲೂ ಭರಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅತ್ತೆಗೂ ಬಿಪಿ ಮತ್ತು ಶುಗರ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅತ್ತೆಯವರಿಗೂ ಸಹ ಚಿಕಿತ್ಸೆಗಾಗಿ ಎದುರುದಾರರು ಸುಮಾರು ರೂ.5,000/- ಹಣವನ್ನು ಪ್ರತಿ ತಿಂಗಳು ಭರಿಸುತ್ತಿರುತ್ತಾರೆ ಎಂದರೆ, ಸಾಕ್ಷಿಯು ಅವರು ಈಗಲೂ ಚೆನ್ನಾಗಿಯೇ ಇದ್ದಾರೆ ಎಂದು ನುಡಿಯುತ್ತಾರೆ.

ಎದುರುದಾರರಿಗೆ 04 ಎಕರೆ ಜಮೀನು ಇರುತ್ತದೆ ಎಂದು ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಗಳಲ್ಲಿ ರಾಗಿ ಬೆಳೆ ಎಂದು ನಮೂದಾಗಿರುತ್ತದೆ ಎಂದರೆ, ಸಾಕ್ಷಿಯು ಅದು ಪಹಣಿಯಲ್ಲಿ ಆ ರೀತಿ ನಮೂದಾಗಿರುತ್ತದೆ, ಆದರೆ ಸದರಿ ಜಮೀನಿನಲ್ಲಿ ಅಡಿಕೆ ಬೆಳೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳಂತೆ ಎದುರುದಾರರು ರಾಗಿ ಮಾತ್ರ ಸದರಿ ಜಮೀನಿನಲ್ಲಿ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಎದುರುದಾರರ ಜಮೀನಿನಲ್ಲಿರುವ ಅಡಿಕೆಯನ್ನು ಚೇಣಿಗೆ ಎಂಬುದರ ಬಗ್ಗೆ ತೋರಿಸಲು ದಾಖಲಾತಿ ಇರುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಅಡಿಕೆ ಚೇಣಿಯನ್ನು ಎದುರುದಾರರ ಅಣ್ಣ ಮಾಡುತ್ತಾರೆ, ಅದಕ್ಕೆ ಸಂಬಂಧಿಸಿದಂತೆ ದಾಖಲೆ ಇರುವುದಿಲ್ಲ ಎಂದು

ನುಡಿಯುತ್ತಾರೆ. ಎದುರುದಾರರಿಗೆ ಯಾವುದೇ ಅಡಿಕೆ ಬೆಳೆ ಇರುವುದಿಲ್ಲ ಮತ್ತು ಅಡಿಕೆ ಚೇಣಿಯನ್ನು ಮಾಡುವುದಿಲ್ಲ, ಅವರು ಜಮೀನಿನಲ್ಲಿ ರಾಗಿ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ಇರುವ 04 ಎಕರೆ ಆಸ್ತಿಯನ್ನು 03 ಭಾಗ ಮಾಡಿದರೆ ಅದರ ಪೈಕಿ 01 ಎಕರೆ 10 ಗುಂಟೆ ಮಾತ್ರ ಎದುರುದಾರರ ಹಿಸ್ಸೆಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಎದುರುದಾರರೊಂದಿಗೆ ಇದ್ದಾಗ ಎದುರುದಾರರು ಬೆಂಗಳೂರಿನ ಕೊಡಿಗೆಹಳ್ಳಿಯ True Medics ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಪ್ರಸ್ತುತವಾಗಿ ಎದುರುದಾರರು ಈಗ ಏನು ಕೆಲಸ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಎದುರುದಾರರು ನನ್ನೊಂದಿಗೆ ಇದ್ದಾಗ Lab Technician ಕೆಲಸ ಮಾಡುತ್ತಿದ್ದು, ನಾನು ಅವರನ್ನು ಬಿಟ್ಟು ಬಂದ ನಂತರ ಎದುರುದಾರರು ಮಾನಸಿಕವಾಗಿ ನೊಂದು ಆ ಕೆಲಸವನ್ನು ಬಿಟ್ಟು ಬಂದು ಮನೆ ಸೇರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ಮರುಳನಹಳ್ಳಿ ಗ್ರಾಮದಲ್ಲಿ ಬೇರೆಯವರ ಜಮೀನಿನಲ್ಲಿ ಟ್ರ್ಯಾಕ್ಟರ್ ಚಾಲಕನಾಗಿ ಈಗ ಕೆಲಸ ನಿರ್ವಹಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರರಿಗೆ ಸ್ವಂತ ಟ್ರ್ಯಾಕ್ಟರ್ ಇರುತ್ತದೆ ಎಂದು ನುಡಿಯುತ್ತಾರೆ.

ನಾನು ಹೇಳುವಂತೆ ಎದುರುದಾರರು ಬೆಂಗಳೂರಿನ ಕೊಡಿಗೆಹಳ್ಳಿಯ True Medics ಕಂಪನಿಯಲ್ಲಿ ಮ್ಯಾನೇಜರ್ ಆಗಿ ತಿಂಗಳಿಗೆ ರೂ.1 ಲಕ್ಷ ಹಣವನ್ನು ಸಂಬಳವನ್ನು ಪಡೆಯುತ್ತಿದ್ದಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಎದುರುದಾರರ ಜಮೀನಿಂದ ವಾರ್ಷಿಕವಾಗಿ ರೂ.18 ರಿಂದ 20 ಲಕ್ಷ ಆದಾಯ ಬರುತ್ತದೆ ಎಂದು ನಾನು ತಿಳಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಪ್ರೀತಿಸ ವಿವಾಹವಾದ ನಂತರ ಬಹಳ ಪ್ರೀತಿಯಿಂದ, ಕಾಳಜಿಯಿಂದ, ವಿಶ್ವಾಸದಿಂದ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಕುಟುಂಬದವರ ಇಚ್ಛೆಗೆ ವಿರುದ್ಧವಾಗಿ ಎದುರುದಾರರನ್ನು ಮದುವೆಯಾಗಿದ್ದರಿಂದ ಅದೇ ದ್ವೇಷದ ಹಿನ್ನಲೆಯಲ್ಲಿ ಎದುರುದಾರರೊಂದಿಗೆ ಚೆನ್ನಾಗಿ ಇರದಂತೆ ನನ್ನ ಕುಟುಂಬದವರು ಎದುರುದಾರರನ ವಿರುದ್ಧ ನನ್ನ ಮನಸ್ಸಿನಲ್ಲಿ ದ್ವೇಷ ಬರುವಂತೆ ಪ್ರೇರೇಪಣೆ ಮಾಡಿ ನನ್ನನ್ನು ಅವರಿಂದ ದೂರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರು ಎಂದಿಗೂ ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಊಟ, ವಸತಿ ಮತ್ತು ಬಟ್ಟೆಯನ್ನು

ನೀಡದೆ ಮನೆಯಿಂದ ಹೊರ ಹಾಕಿರುವುದಿಲ್ಲ, ನಾನೇ ನನ್ನ ತಂದೆ-ತಾಯಿಯ ಮಾತನ್ನು ಕೇಳಿ ಎದುರುದಾರರ ಮನೆಯನ್ನು ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಎದುರುದಾರರೊಂದಿಗೆ ಹೋದರೆ ನನ್ನನ್ನು ಮತ್ತು 2 ನೇ ಅರ್ಜಿದಾರರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಈಗ ನಾನು ಎದುರುದಾರರಿಂದ ಒಂದು ವರ್ಷದಿಂದ ಇಚೀಗೆ ಪ್ರತ್ಯೇಕವಾಗಿ ವಾಸವಿರುತ್ತೇನೆ. ಎದುರುದಾರರ ಮನೆಯಿಂದ ನಾನಾಗಿಯೇ ಮನೆಯಿಂದ ಹೊರಗೆ ಹೋಗಿದ್ದು, ಎದುರುದಾರರಿಂದ ಹೆಚ್ಚು ಜೀವನಾಂಶವನ್ನು ಪಡೆಯುವ ಉದ್ದೇಶದಿಂದ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.